


**ಎಡದಿಂದ ಬಲಕ್ಕೆ:**

1. ಸವಾಲನ್ನು ಬಿಡಿಸಿ ಬಿಡಿಸಿ ತನ್ನ ಕಾಲ ಮೇಲೇ ನಿಂತವನೀತ (4)
3. ಮಿನುಗುವ ವಸ್ತು ಕಂಡದ್ದು ಪಕ್ಷದ ಒಂಬತ್ತನೇ ದಿನ (3)
4. ಗಳಿಸಲಾಗದವ ಹೀಗೆ ಸಾಲಗಾರನಾದನೇ? (3)
6. ಮರೆತು ಬಿಡುವುದನ್ನು ತೀವ್ರಗೊಳಿಸು (4)
7. ಅಭಯ ನೀಡುವವನಂತೆ ಅದ್ಭುತ ನಟನೆ (4)
8. ಹಾಸಿಗೆಯನ್ನು ಸುತ್ತಿ ಬಂದದ್ದು ಎಳೇ ಮಗು (4)
10. ನಾಶವನ್ನೇ ನೆನೆಸುತ್ತ ನೆನೆಸುತ್ತ ಬರೀ ಕಿರಿಕಿರಿ (4)
12. ಅವನು ಮನಃಪೂರ್ತಿಯಾಗಿ ನೀಡಿದ ಒಪ್ಪಿಗೆ ಇದು (4)
14. ಮುಸುಕು ಧರಿಸಿ ಬಂದವ 'ಆಸೆಗಳ ಆಳು' (4)
16. ಹೊನ್ನಿನ ಆಸೆಗಾಗಿ ಎಂಥ ಭೀಕರ ಕೊಲೆ! (3)
17. ವಿಪ್ಲವಗಳ ಸಂಖ್ಯೆ ಬಹಳವೇ ಆಯಿತು (3)
18. ಕಿಂಚಿತ್ತನ್ನೂ ಬಿಡದೆ ಯಮನನ್ನೇ ಪ್ರಶ್ನಿಸಿದ ಪೌರಾಣಿಕ ಬಾಲಕ (4)

**ಮೇಲಿಂದ ಕೆಳಕ್ಕೆ:**

1. ಸಮಾನತೆಯ ಮಾತಾಡಿದ್ದಕ್ಕೆ ಸಿಕ್ಕಿದು ಒಡೆತನ (3)
2. ತಪ್ಪಾಗಿ ಬಿಡಿಸಿದ್ದನ್ನೆಲ್ಲ ದೂರ ಎಸೆ (3)
3. ನಮ್ಮ ನಾಡಿನವರದ್ದೇ ಹಾಗೆ, ವಿನೀತ ನಡವಳಿಕೆ (4)
5. ಈ ಸಂಡಿಗೆ ಅದೇಕೊ ತುಂಬ ಗಟ್ಟಿ, ಒರಟು (3)
7. ಭಜನೆಯ ನಂತರ ಅಜ್ಜನಿಗೆ ಎಣ್ಣೆ ಸ್ನಾನ (4)
9. ಆ ಪರಿಸ್ಥಿತಿಯಲ್ಲಿ ದೇವತೆಗಳ ಒಡೆಯ ಯಾರು? (4)
11. ಹಾವಿನ ಸಂರಕ್ಷಣೆಗೆ ನಡೆಸಿದ ಹೋಮ ತಲೆಕೆಳಗು (3)
13. ಅವನು ಕೋಲು ಹಿಡಿದರೇ ತುಂಬ ಸೌಕರ್ಯ (4)
14. ಸದನವನ್ನು ನಡೆಸಿ ರಕ್ಷಿಸಿದ ಕಾಡು ಇದೇ (3)
15. ಸ್ವಾತಂತ್ರ್ಯವಿಲ್ಲದ್ದೇ ಸೂರ್ಯ ಕೂಡ (3)

---

### ಪದಬಂಧ 12-6-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಸಂಧಾನ; 3. ಆದಾಯ; 4. ಸೀಮಿತ; 6. ಗುರುತಿಸು; 7. ಮುರುಕಲು; 9. ನಿರುಪಮ; 11. ಸಹವಾಸ; 15. ತತ್ಫಲ; 16. ರಹೀಮ; 17. ಯಕ್ಷಿಣಿ.

**ಮೇಲಿಂದ ಕೆಳಕ್ಕೆ:**

1. ಸಂಯಮ; 2. ನಸೀಬು; 3. ಆಣತಿ; 5. ತಳಿರು; 6. ಗುಮಾನಿ; 8. 'ಉವಾಸ' (ಸವಾಲು ತಲೆ ಕೆಳಗು); 10. ಪತಿತ; 12. ಹಕೀಮ; 13. ನಿಲಯ; 14. ಧರಣಿ.

# ಪ್ರಶ್ನಾಂಕಣ

## ಚಂದ್ರ ಶಿಲೆ - ಎಷ್ಟು ಬೆಲೆ?

ಓಹ್! ಅದನ್ನು ನಂಬಲೂ ಆಗುವುದಿಲ್ಲ; ಅದು ಕಲ್ಪನೆಗೂ ಎಟುಕುವುದಿಲ್ಲ, ಬಿಡಿ!

ಏಕೆಂದು ನೀವೇ ನೋಡಿ: ಚಿತ್ರದಲ್ಲಿರುವುದೊಂದು ಚಂದ್ರ ಶಿಲೆ ಎಂದರೆ ಚಂದ್ರನ ನೆಲದ ಒಂದು ಕಲ್ಲು. ಚಿಕ್ಕ ಜೆಲ್ಲಿ ಕಲ್ಲೊಂದರ ಗಾತ್ರದ ಈ ಶಿಲಾಚೂರಿನ ತೂಕ ಸಮೀಪ 150 ಗ್ರಾಂ. ಇದರ ಬೆಲೆ ಸುಮಾರು 2.5 ರಿಂದ 3 ಕೋಟಿ ರೂಪಾಯಿ. ಇಷ್ಟೇ ತೂಕದ ಅಪ್ಪಟ ಬಂಗಾರದ ಬೆಲೆ 4.5 ಲಕ್ಷ ರೂಪಾಯಿ. ಇದು ಕಾನೂನುಬದ್ಧ ಹರಾಜಿನಲ್ಲಿ ಆಗಬಹುದಾದ ಬೆಲೆ. ಕಾಳಸಂತೆಯಲ್ಲಾದರೆ ಇಂಥದೇ ಚಂದ್ರ ಶಿಲಾಚೂರಿನ ಬೆಲೆ ಮೂವತ್ತು ಕೋಟಿ ರೂಪಾಯಿ ಮುಟ್ಟಬಹುದು.

### ಏಕೆ ಹೀಗೆ?

ಏಕೆಂದರೆ ಚಂದ್ರಶಿಲೆ ಚಂದ್ರನಿಂದ ಭೂಮಿಗೆ ತಂದಿರುವ ಅಥವಾ ಬಂದಿರುವ ಬಂಡೆ ತುಣುಕು. ನಮ್ಮಿಂದ ಮೂರು ಲಕ್ಷ ಎಂಬತ್ನಾಲ್ಕು ಸಾವಿರ ಕಿ.ಮೀ. ದೂರದಲ್ಲಿರುವ ಭೂ ಸಂಗಾತಿಯಾದ, ಅನ್ಯಲೋಕವಾದ ಚಂದ್ರನ ನೆಲದ ಕಲ್ಲಿನ ಚೂರು ಎಂಬ ಭಾವುಕತೆ ಮತ್ತು ಭೂಮಿಯಲ್ಲಿ ಅದರ ಅಲಭ್ಯ ಎನಿಸುವಷ್ಟು ವಿರಳತೆ – ಈ ಕಾರಣಗಳಿಂದಾಗಿ ಅತಿ ಶ್ರೀಮಂತರಿಗೆ ಚಂದ್ರ ಶಿಲೆ ಅತ್ಯಮೂಲ್ಯ ವಸ್ತು. ಹಾಗಾಗಿ ಚಂದ್ರ ಶಿಲೆಗೆ ಅಪಾರ ಬೇಡಿಕೆ. ಆದ್ದರಿಂದ ಇಂಥ ಬೆಲೆ.



ಸದ್ಯದಲ್ಲಿ ಭೂಮಿಯಲ್ಲಿ ಚಂದ್ರಶಿಲೆ ಅತ್ಯಲ್ಪ ಪ್ರಮಾಣದಲ್ಲಿದೆ. ಮೂರು ಮೂಲಗಳಿಂದ ಅದು ಭೂಮಿಗೆ ಬಂದಿದೆ. ಮೊದಲಿನದು 1969–1972 ರ ಅವಧಿಯಲ್ಲಿ ಅಮೆರಿಕದ ಅಪೋಲೊ ವ್ಯೋಮನೌಕೆಗಳು ತಂದ ಒಟ್ಟು ಸುಮಾರು ನಾಲ್ಕುನೂರು ಕಿಲೋ ಕಲ್ಲುಗಳು. ಇದರ ಅತ್ಯಲ್ಪ ಭಾಗವನ್ನು ಚಿತ್ರದಲ್ಲಿರುವಂತಹ ಸ್ಮರಣಿಕೆಗಳ ರೂಪದಲ್ಲಿ ಅಮೆರಿಕ ತನ್ನ ಮಿತ್ರರಾಷ್ಟ್ರಗಳಿಗೆ ಕೊಡುಗೆಯಾಗಿ ನೀಡಿದೆ. ಕೆಲ ಕೆಲವೇ ಗ್ರಾಂನ ಸ್ಯಾಂಪಲ್ಲುಗಳನ್ನು ಸಂಶೋಧನೆಗೆ ನಾನಾ ವಿಜ್ಞಾನ ಸಂಸ್ಥೆಗಳಿಗೆ ನೀಡಿದೆ. ಉಳಿದ ಸುಮಾರು ಮುನ್ನೂರು ಕಿಗ್ರಾಂ ಚಂದ್ರಶಿಲೆಗಳು 'ನ್ಯಾಸಾ'ದ ತಿಜೋರಿಗಳಲ್ಲಿ ಭದ್ರವಾಗಿ ಉಳಿದಿವೆ. ಸೋವಿಯತ್ ಒಕ್ಕೂಟದ ಮಾನವ ರಹಿತ ಚಂದ್ರನೌಕೆಗಳು ಚಂದ್ರನ ನೆಲದಿಂದ ಬಾಚಿ ತಂದ ಶಿಲಾಪುಡಿ ಮತ್ತು ಕಲ್ಲಿನ ತುಣುಕುಗಳ ಅಲ್ಪ ಸಂಗ್ರಹ ಚಂದ್ರಶಿಲೆಗಳ ಎರಡನೆಯ ಆಕರ. ಕ್ಷುದ್ರಗ್ರಹಗಳು ಚಂದ್ರನಿಗೆ ಬಡಿದಾಗ ಸಿಡಿದು ಹಾರಿ ಭೂ ಗುರುತ್ವಕ್ಕೆ ಸಿಲುಕಿ ಧರೆ ಧುಮುಕಿ ಉಲ್ಕೆಯಾಗಿ ಉರಿದು ಉಳಿದ ಚಂದ್ರ ಉಲ್ಕಾವಶೇಷಗಳು ಮೂರನೆಯ ಮೂಲ. ಇಂತಹ ಚಂದ್ರ ಶಿಲೆಗಳದು ಅತೀವ ವಿರಳ ಸಂಖ್ಯೆ. ಹಾಗೆ ಅತ್ಯಪರೂಪದ ವಸ್ತುವಾಗಿರುವುದರಿಂದ ಚಂದ್ರಶಿಲೆಗೆ ಇಷ್ಟು ಬೆಲೆ.

**ಎನ್. ವಾಸುದೇವ್**